# ಎನ್.ವಿ. ವಾಸುದೇವ ಶರ್ಮಾ ಕವಿತೆಗಳು

ಚಿತ್ರಗಳು: ಮಂಜುನಾಥ ಹುಲಕೊಪ್ಪದ

## ಕನಸಲೇನಿದೆ?

ಬೆಕ್ಕಿನ ಕನಸಲಿ
ಇಲಿಗಳ ಓಟ
ಇರುವೆಯ ಸಾಲಿಗೆ
ಸಕ್ಕರೆಯೂಟ

ಬೌಬೌ ನಾಯಿಯ
ಕನಸಿನ ಲೋಕದಿ
ಬರೀ ಎಲುಬುಗಳ
ಅರಮನೆ ಕಾಟ

ಕನಸುವುದೇನು
ಗೆದ್ದಲ ಹುಳುವು
ಪುಟ್ಟನ ಪುಸ್ತಕ
ತಿನ್ನುವ ಊಟ?

ಹೂ. ಉಳಿದಿರುವುದೇನು?
ಪುಟ್ಟನ ಕನಸಿರಲಿ
ನನಸಲಿ ಕೂಡಾ
ಬರೀ ಮರಕೋತಿಯಾಟ!







- ಮಕ್ಕಳು ತಾವು ಕಾಣುವ ಕನಸುಗಳನ್ನು ಹಂಚಿಕೊಳ್ಳಲಿ.
- ಒಮ್ಮೊಮ್ಮೆ ಕನಸುಗಳು ಚಿತ್ರವಿಚಿತ್ರವಾಗಿರುತ್ತವೆ. ಹಾಗೆಂದು ಕನಸುಗಳಿಗೆ ಅರ್ಥಕೊಡಲು ಹೊರಡಬೇಡಿ!
- ಎಲ್ಲ ಕನಸುಗಳು ರಮ್ಯವಾಗಿರುತ್ತವೆ ಎನ್ನಲಾಗದು, ಏನಾದರೂ ಭಯವಾಗುವ ಅಥವಾ ಆತಂಕವಾಗುವ ಕನಸುಗಳಿದ್ದರೆ ಆ ಕುರಿತು ಚರ್ಚೆ ಮಾಡಲಿ.





## ಚಂದ್ರನ ಮೇಲಂಗಡಿ

ಚಂದ್ರನ ತನಕ ಹೋಗಿದ್ ಬಂದ್ರು
ಭೂಮಿ ಮೇಲಿನ್ ಜನ್ರು
ಬೇರೆ ಗ್ರಹಕ್ಕೂ ಹೋಗ್ಬರೋ ಮನಸು
ಕಟ್ತಾ ಇದ್ದಾರ್ ಕನಸು

ಈಗ್ ಸದ್ಯಕ್ಕೆ ಆಗಿದ್ಯಂತೆ
ಚಂದ್ರ ಪಕ್ಕದ್ ಕೋಣೆ
ಇನ್ನೇನ್ ಬುಧ ಮಂಗಳನ್ಮೇಲೂ
ಕಟ್ಬೇಕಂತೆ ಮನೆ

ಚಂದ್ರನ್ಮೇಲೋ ಮಂಗಳನ್ಮೇಲೋ
ಊರು ಕೇರಿ ಬೆಳದ್ರೆ
ಮೂಲೇ ಅಂಗ್ಡಿ ಮಾದಪ್ಪೋರು
ಅಲ್ಲೇ ಅಂಗ್ಡಿ ಇಟ್ರೆ?

ಆಗ್ ಮಂಗ್ಳ ಬುಧ ಗ್ರಹದಿಂದ್
ಗುರು ಶುಕ್ರ ಶನಿಯಿಂದ
ಚೀಲ ಇಟ್ಕೊಂಡ್ ರಾಕೆಟ್ ಹತ್ಕೊಂಡ್
ಬಂದ್ರೆ ಸಂತೆ ಜೋರು!

- ಇದೊಂದು ತಮಾಷೆ ಹಾಡು ಎನಿಸಬಹುದು. ಭೂಮಿಯೊಡನೆ ಇರುವ ಹಲವು ಗ್ರಹಗಳ ಬಗ್ಗೆ ಮಕ್ಕಳು ಮಾತನಾಡಲಿ.
- ಎಷ್ಟು ಗ್ರಹಗಳಿಗೆ ಹೋಗಿಬಂದಿದ್ದಾರೆ, ಅಥವಾ ಉಪಗ್ರಹ ಕಳುಹಿಸಿದ್ದಾರೆ ಎಂದು ಮಾತನಾಡಲಿ.
- ಭಾರತ ಎಲ್ಲಿಯ ತನಕ ಉಪಗ್ರಹಗಳನ್ನ ಕಳುಹಿಸಿದೆ ಎಂದೂ ತಿಳಿಯಲಿ.